ಶ್ರೀ ಸಿದ್ದಯ್ಯ ಕಾಶೀಮಠ್.—ನಾದುರಸ್ತಾಗಿರತಕ್ಕ ಕಟ್ಟಡಗಳಿಗಾದರೂ ಈ ವರ್ಷ ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಕೇಂದ್ರ ಸರ್ಕಾರದವರಿಂದ ಹಣ ಬಂದರೆ ನೋಡೋಣ.

---

## School Buildings that are in a dilapidated condition in Tumkur Taluk.

* *Q.*—697. Smt. G. C. BHAGEERATHAMMA (Tumkur).—

Will the Government be pleased to state:—

(*a*) the number of school buildings that are in a dilapidated condition in Tumkur Taluk;

(*b*) whether they have provided any amount during 1964-65 for effecting repairs to the said school building ?

*A.*—Sri S. R. KANTHI (Minister for Education).—

(*a*) Six.

(*b*) Yes. The repairs and maintenance of the Primary Sehool buildidgs in rural areas are the responsibility of the Taluka Development Board.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಕಾರ್ಯವನ್ನು ತಾಲ್ಲೂಕ್ ಬೋರ್ಡ್ ಅಭಿವೃದ್ಧಿ ಮಂಡಲಗಳಿಗೆ ವಹಿಸುವುದಕ್ಕೆ ಮುನ್ನ ಯಾವ ಇಲಾಖೆಯ ಆಡಳಿತದಲ್ಲಿ ಈ ಕೆಲಸಗಳು ನಡೆಯುತ್ತಿದ್ದವು, ಮತ್ತು ಈ ಬಾಬಿಗೆ ಅಲ್ಲಿಯತನಕ ಖರ್ಚಾಗಿದ್ದ ಹಣವೆಷ್ಟು ?

† ಶ್ರೀ ಎಸ್. ಆರ್. ಕಂಠಿ.—ಆ ಕಾರ್ಯವನ್ನು ಸರ್ಕಾರದವರೇ ನೋಡಿಕೊಳ್ಳುತ್ತಿದ್ದರು. ಖರ್ಚಿನ ವಿಚಾರಕ್ಕೆ ನೋಟೀಸ್ ಕೊಟ್ಟರೆ ಅದಕ್ಕೆ ಉತ್ತರವನ್ನು ಒದಗಿಸಲಾಗುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—50 ಸಿವಿಲ್ ವರ್ಕ್ಸ್‌ನಲ್ಲಿ ದುಡ್ಡಿದ್ದರೆ ಕೊಡಲಾಗುವುದೆಂದು ಹೇಳಿದ್ದರು, ಅದರಲ್ಲಿ ಇರತಕ್ಕ ಹಣವನ್ನು ಕೊಡುವುದಕ್ಕೆ ಸರ್ಕಾರದವರು ಪ್ರಯತ್ನವನ್ನೇಕೆ ಮಾಡಬಾರದು ?

ಶ್ರೀ ಎಸ್. ಆರ್. ಕಂಠಿ.—ಹಣ ಇದ್ದರೆ ನೋಡೋಣ.

Sri G. V. GOWDA.—Supplementary to (*b*): May I know whether the Taluk Boards have undertaken that responsibility or whether they have given in writing that they have taken over the management of these schools ?

ಶ್ರೀ ಎಸ್. ಆರ್. ಕಂಠಿ.—ರಿಪೇರಿ ಮಾಡಿಸುವುದು ಕಟ್ಟಡ ಕಟ್ಟಿಸುವುದು ಅವರ ಜವಾಬ್ದಾರಿ. ಅದನ್ನು ಅವರೇ ಮಾಡಿಕೊಳ್ಳುತ್ತಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಕಟ್ಟಡಕ್ಕೆ ಅವರು ಹಣವನ್ನೊದಗಿಸಿದ್ದರೆ, ನೀವು ರಿಪೇರಿಗಾದರೂ ಹಣವನ್ನು ಒದಗಿಸುತ್ತೀರಾ ?

ಶ್ರೀ ಎಸ್ ಆರ್. ಕಂಠಿ.—ರಿಪೇರಿಗಾದರೆ ಹಣವನ್ನು ಕೊಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನ ಭೀಮಸಂದ್ರದಲ್ಲರತಕ್ಕ ಪ್ರಾಥಮಿಕ ಶಾಲಾ ಕಟ್ಟಡ ಶಿಥಿಲವಾಗಿ ಬಿದ್ದುಹೋಗಿರುವುದರಿಂದ ಆ ಪಾಠಶಾಲೆಯನ್ನು ಈಗ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆ ರೀತಿ ಗಮನಕ್ಕೆ ಬಂದಿದ್ದರೆ ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಭೀಮಸಂದ್ರ ವಿಷಯ ಗೊತ್ತಿಲ್ಲ. ಅದನ್ನು ನೋಡುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ತುಮಕೂರು ತಾಲ್ಲೂಕಿನ ಬೆಳ್ಳಾವಿಯಲ್ಲಿರತಕ್ಕ ಮಿಡಲ್ ಸ್ಕೂಲ್ ಕಟ್ಟಡ ಬಹಳ ಶಿಥಿಲವಾಗಿ ಬಿದ್ದುಹೋಗುವ ಸ್ಥಿತಿಯಲ್ಲಿರುವುದರಿಂದ ಸರ್ಕಾರದವರು ಈ ಕೂಡಲೇ ಇದನ್ನು ಸ್ಪೆಷಲ್ ಕೇಸು ಎಂಬುದಾಗಿ ಪರಿಗಣಿಸಿ ದುರಸ್ತು ಕೆಲಸಕ್ಕಾಗಿ ಸಾಕಷ್ಟು ಹಣ ಸಹಾಯ ಮಾಡುತ್ತಾರೆಯೇ ಅಥವಾ ಆ ಶಾಲೆಯ ಮಕ್ಕಳ ಪ್ರಾಣದ ಜವಾಬ್ದಾರಿಯನ್ನು ಸರ್ಕಾರದವರು ವಹಿಸುತ್ತಾರೋ ?

ಶ್ರೀ ಎಸ್. ಆರ್. ಕಂಠಿ.—ನುಮಾರು ಒಂದೂವರೆ ವರ್ಷಗಳ ಹಿಂದೆ ನಾನು ಬೆಳ್ಳಾವಿಗೆ ಹೋಗಿದ್ದಾಗ ಮಾನ್ಯ ಸದಸ್ಯರು ಹೇಳಿದಂಥ ಪಾಠಶಾಲೆಯನ್ನು ನೋಡಿದ್ದೆ. ಅದು ಚೆನ್ನಾಗಿಯೇ ಇದೆ. ಆದರೆ ಮಳೆಯಾದಾಗ ಸ್ವಲ್ಪಮಟ್ಟಿಗೆ ಅಲ್ಲಿ ತೊಂದರೆ ಇರಬಹುದು. ಅದನ್ನು ನೋಡುತ್ತೇವೆ

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕಟ್ಟಡಗಳು ಶಿಥಿಲವಾಗಿ ಐದಾರು ವರ್ಷಗಳಾಗಿವೆ. ಅದಕ್ಕೆ ಹಣವನ್ನು ಒದಗಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದು ತಮ್ಮ ಒಬ್ಬರದೇ ಜವಾಬ್ದಾರಿಯಲ್ಲ ಶ್ರೀಮಾನ್ ಜತ್ತಿ ನಹೇಬರು ಸಾಕಷ್ಟು ಹಣವನ್ನು ಒದಗಿಸಿಕೊಡದಿದ್ದರೆ ಈ ವಿಚಾರವನ್ನು ಕ್ಯಾಬಿನಟ್ಟಿನಲ್ಲಿಟ್ಟು ಅಲ್ಲಿಂದ ಮಂಜೂರಾತಿ ಪಡೆದು ಇಂತಹ ದುರಸ್ತಿ ಕೆಲಸಗಳಿಗೆ ಆ ಹಣವನ್ನು ಉಪಯೋಗಿಸಿದರೆ ಅದು ಮಾನ್ಯ ಮಂತ್ರಿಗಳ ಘನತೆಗೆ ಒಳ್ಳೆಯದಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆ ರೀತಿ ವೈಯಕ್ತಿಕವಾಗಿ ಹಣವನ್ನು ಅವರಿಂದ ತೆಗೆದುಕೊಳ್ಳುವುದು ಸರಿಯಲ್ಲ. ಸರ್ಕಾರದವರು ಅದು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆಂದು ನಿಗದಿಮಾಡಿರುತ್ತಾರೋ ಆ ರೀತಿಯಲ್ಲಿ ಹಣವನ್ನು ಯಾವ ತೊಂದರೆಯೂ ಇಲ್ಲದೆ ಪಡೆಯಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ರೌಂಡ್ ಅಚೌಟ್ ಹೋಗುವುದು ಬೇಡ. 50, ಸಿವಿಲ್ ವರ್ಕ್ಸ್‌ಗೆ ಒದಗಿಸಿರುವ ಹಣದಲ್ಲಿ ಈ 6 ಕಟ್ಟಡಗಳ ದುರಸ್ತಿ ಕೆಲಸವನ್ನು ಪೂರ್ಣಮಾಡುವುದಕ್ಕೆ ಈಗಲಾದರೂ ಸರ್ಕಾರದವರು ಸಹಾಯಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರವನ್ನು ಮಾನ್ಯ ಸದಸ್ಯರು ಈಗ ಸೂಚನೆ ಮಾಡಿದ್ದಾರೆ. ಅದನ್ನು ನೋಡೋಣ.

ಶ್ರೀ ಬಿ. ಎಲ್. ಗೌಡ.—ಅಲ್ಲಿನ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಈಗ ಸರ್ಕಾರದವರು ಕೊಡುತ್ತಿರುವ ಹಣ ಸಾಕಾಗುವುದಿಲ್ಲವೆಂದು ಸರ್ಕಾರದ ಗಮನಕ್ಕೆ ತಂದಿರುವುದರಿಂದ ಆ ವಿಚಾರದಲ್ಲಿ ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಅದು ಬಹಳ ದೊಡ್ಡ ಕೆಲಸ. ಸರ್ಕಾರದವರನ್ನು ಸಹಾಯ ಮತ್ತಷ್ಟು ಮಾಡಿ ಎಂಬುದಾಗಿ ಕೇಳಿದ್ದಾರೆ. ಆದರೆ ನಾವು ಮಾಡುವುದಿಲ್ಲವೆಂದು ಹೇಳುವುದಿಲ್ಲ.

**Sri G. V. GOWDA.**—May I know whether the Dharwar School Board had contributed anything for the purpose of repairs work ?

**Sri S. R. KANTHI.**—I am not aware of it Sir.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹೊಸಹೊಸ ಸ್ಕೂಲುಗಳನ್ನು ಕಟ್ಟಿರುವುದಕ್ಕೆ ಸರ್ಕಾರಕ್ಕೆ ಸಾಕಷ್ಟು ಹಣಸಹಾಯ ಮಾಡುವುದಕ್ಕಾಗುವುದಿಲ್ಲವೆಂದು ಹೇಳುವಾಗ ಇರತಕ್ಕ ಹಳೆಯ ಸ್ಕೂಲುಗಳನ್ನಾದರೂ ದುರಸ್ತುಮಾಡಿ ಉಳಿಸಿಕೊಳ್ಳುವುದಕ್ಕಾದರೂ ಸರ್ಕಾರದವರು ಹಣ ಸಹಾಯ ಮಾಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ವರ್ಷೇ ವರ್ಷೇ ನುಮಾರು ಎರಡು ಸಾವಿರ ವಿದ್ಯಾರ್ಥಿಗಳು ಹೆಚ್ಚುವುದರಿಂದ ಹೊಸದಾಗಿ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕು ಮತ್ತು ಹಳೆಯ ಶಾಲಾ ಕಟ್ಟಡಗಳ ದುರಸ್ತು ಕೆಲಸವನ್ನೂ ಸಹ ಮಾಡಬೇಕು. ಈ ಎರಡು ಕೆಲಸಗಳನ್ನೂ ಮಾಡಬೇಕಾಗುತ್ತದೆ.

---

## Supply of Rice to Fair Price Institutions or Shops recognised by Government in Dharwar District.

*Q.—708. **Sri A. J. DODDAMETI** (Ron).—

Will the Government be pleased to state :—

(*a*) whether it is a fact that rice has not been supplied since last December to some of the Fair Price Institutions or shops, recognised by Government in Dharwar District;

(*b*) if so, the reasons for the same and the number of such shops ;

(*c*) whether they are aware that people of the said area are put to inconvenience on account of non-supply of rice ;

(*d*) if so, the steps taken by them in this behalf ?